ದಿಃ **04.09.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ - ಪ್ರತಿವಾದಿ 7 ರ ಪರ ವಕೀಲರಿಂದ;**

7. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ಹಾಜರುಪಡಿಸಿ ಗುರುತಿಸಿಕೊಂಡ ದಾಖಲಾತಿಗಳ ಕುರಿತು ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಿಪಿ2ರ ದಾಖಲೆಯಲ್ಲಿ ಪ್ರತಿವಾದಿ 7ರವರ ಹೆಸರು ದಾಖಲು ಇರುತ್ತದೆ ಎಂದರೆ ಸರಿ. ನಿಪಿ7ರ ದಾಖಲೆಯನ್ನು ಪ್ರಶ್ನಿಸಿ ನಾನು ಇಲ್ಲಿಯವರೆಗೆ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಅನುಸೂಚಿ 1ರ 138/5ರ ಸ್ವತ್ತಿನ ವಿಸ್ತೀರ್ಣ 16x50 ಅಡಿ ಇರುತ್ತದೆ. ಸದರಿ ಸ್ವತ್ತಿನ ಅಕ್ಕಪಕ್ಕ ಅಂಗಡಿಗಳು ಇರುತ್ತವೆ ಎಂದರೆ ಸರಿ. ದಾವಾ ಅನುಸೂಚಿ 1ರ ಮೌಲ್ಯ ಸಾಕಷ್ಟು ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ಮೌಲ್ಯ ಇವತ್ತಿನ ಮಾರುಕಟ್ಟೆಯ ಪ್ರಕಾರ ಅಂದಾಜು ರೂ.50 ಲಕ್ಷ ಇರುತ್ತದೆ ಎಂದರೆ ಸರಿ. ರಿ. ಸಾ. ನಂ.2/14 ರ ಜಮೀನಿನ ಮೌಲ್ಯ ಎಷ್ಟಿರುತ್ತದೆ ಎಂಬುವುದು ನನಗೆ ಗೊತ್ತಿಲ್ಲ.

8. ನಮ್ಮ ಪಾಲಿಗೆ ಬಂದ ಸಿ ಟಿ ಎಸ್ ನಂಬರ-4936 ರ ಸ್ವತ್ತನ್ನು ಈ ದಾವೆಯಲ್ಲಿ ನಾವು ಸೇರಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಇದೊಂದು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಿ ಟಿ ಎಸ್ ನಂಬರ-4939 ಕ್ಕೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಿ ಟಿ ಎಸ್ ನಂಬರ-4936 ಹಾಗೂ ಸಿ ಟಿ ಎಸ್ ನಂಬರ-4939 ಇವುಗಳು ಅಕ್ಕ ಪಕ್ಕ ಇರುತ್ತವೆ ಎಂದರೆ ಸರಿ. ಪ್ರತಿವಾದಿ 7ರವರಿಗೆ ಸೇರಿದ ಸಿ ಟಿ ಎಸ್ ನಂಬರ-4939 ರಲ್ಲಿ ಇನ್ನೂ ಮನೆ ಕಟ್ಟಿಸಿಕೊಂಡಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.